ಶ್ರೀ ಸಿ. ಎಂ. ಆಣ್ಣಯ್ಯಪ್ಪ.—ಇಲ್ಲಿ ತೋರಿಸಿರುವ ಅಂದಾಜಿನ ವೆಚ್ಚಕ್ಕೂ ಕಡಮೆ ದರದಲ್ಲಿ ಈ ಕೆಲಸ ಆಗುತ್ತದೆಂದು ತಮ್ಮ ಗಮನಕ್ಕೆ ಬಂದರೆ ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ನಮ್ಮ ಗಮನಕ್ಕೆ ಬಂದರೆ ವಿಮರ್ಶೆ ಮಾಡಿಸುತ್ತೇವೆ.

ಶ್ರೀ ಸಿ. ಎಂ. ಆಣ್ಣಯ್ಯಪ್ಪ.—ಇದು ಕ್ಷಾಮಪೀಡಿತ ಪ್ರದೇಶದಲ್ಲಿ ಸೇರಿರುವುದರಿಂದ ಇಲ್ಲಿ ಅರ್ಧಭಾಗದ ಮಟ್ಟಿಕೆಲಸವನ್ನೆಲ್ಲಾ ರೈತರೇ ಮಾಡಿಕೊಡಲು ತಯಾರಾಗಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಮಾಡಿ Remunerative ಆಗಿ ಕಂಡುಬಂದರೆ ಪುನಃ ಆಲೋಚನೆ ಮಾಡೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ರೆವೈಸ್ಡ್ ಎಸ್ಟಿಮೇಟ್ ತಯಾರಾಗಿದ್ದರೆ, ಪುನಃ ಕಡಮೆ ದರದಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುವುದಕ್ಕೆ ಸಾಧ್ಯವೆಂದು ಸಲಹೆ ಬಂದರೆ ಪುನಃ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಯಲ್ಲಿ 98 ಕೆರೆಗಳ ಸರ್ವೆ ಮಾತ್ರ ಆಗಿದೆ, ಇನ್ನೂ ಮುಕ್ಕಾಲುಭಾಗ ಕೆರೆಗಳು ಸರ್ವೆ ಆಗದೇ ನಿಂತಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಸರ್ವೆ ಮಾಡಿರ ತಕ್ಕ ಕೆರೆಗಳ ಕೆಲಸವಾದರೇ ಸಾಕೆಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಸರ್ವೆ ಮಾಡಿರತಕ್ಕ ಕೆರೆಗಳ ಕೆಲಸವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲವನ್ನೂ ಇಲ್ಲ, ಕೆಲವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಷ್ಟನ್ನು ತೆಗೆದುಕೊಂಡಿದೆ ?

Sri KADIDAL MANJAPPA.—I can give you from the year 1949-50....

Mr. SPEAKER.—There is answer (*c*). About 170 tanks every year on the average.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ವೆ ಮಾಡುವುದು ಆಯಾ ಜಿಲ್ಲೆಯಲ್ಲಿ ಕೆಲಸ ಮಾಡುವವರನ್ನವಲಂಬಿಸಿರುತ್ತದಲ್ಲವೆ ?

Mr. SPEAKER.—That is understood. Any other question ?

ಶ್ರೀ ಬಿ. ವಿ. ನಾರಾಯಣರೆಡ್ಡಿ.—'Talukwar details are not available' ಎಂದು ಉತ್ತರ ಕೊಡಲಾಗಿದೆ, ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರಿಕ್ಟ್ ಆಫೀಸಿನಲ್ಲಿದ್ದ ವಿವರಗಳನ್ನು ಕೊಡಲಾಗಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಬರೀ 200 ಕೆರೆ, 98 ಕೆರೆ ಎಂದಿರುತ್ತದೆಯೋ ಅಥವಾ ಕೆರೆಗಳ ಹೆಸರುಗಳೂ ಇರುತ್ತವೆಯೊ ?

ಶ್ರೀ ಕಡಿದಾಳ್ ಮಂಜಪ್ಪ.—ಹೆಸರುಗಳು ಅಲ್ಲಿರುವುದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಿದ್ದರೆ ಕೆರೆಗಳನ್ನು ನೋಡಿ ಇಂಥಿಂಥ ಕೆರೆಗಳನ್ನು ಸರ್ವೆ ಮಾಡಿದ್ದೇವೆಂದು ಕೊಡದೆ ಸುಮ್ಮನೆ ವ್ಯಾಪಿನಿಂದ ನೋಡಿ ಕೊಡುತ್ತಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಿಂಥ ಡಿಸ್ಟ್ರಿಕ್ಟ್ ನಲ್ಲಿ ಇಷ್ಟಿಷ್ಟೆಂದು ವರದಿ ಬಂದಿದೆ, ಇನ್ನೂ ಹೆಚ್ಚು ವಿವರಗಳು ಬೇಕಾದರೆ, ತರಿಸಿಕೊಡಬೇಕಾಗುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—200 ಕೆರೆ ಎಂದರೆ, ಅವನ್ನು ಪರೀಕ್ಷೆಮಾಡಿತಾನೆ ಕೊಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಅದೆಲ್ಲಾ ವಿವರ ಗಳಿರುತ್ತವೆ, ನಮ್ಮಲ್ಲಿರುವುದನ್ನು ಇಲ್ಲಿ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ಪ್ರಶ್ನೆ ತಮಗೆ ಬಂದು ಒಂದೂವರೆ ತಿಂಗಳ ಮೇಲಾಗಲಿಲ್ಲವೆ ?

Mr. SPEAKER.—It is understood. Question No. 660 by Sri Panchakshariah. (Some Members rose to put supplementary questions on the previous questions).

At this rate, every question will take half an hour and every member will like to put supplementaries. Moreover, this question pertains to Tumkur District.

Repairing tanks and providing drinking water wells in Hassan District.

Q.—660. Sri K. PANCHAKSHARAIAH (Arsikere).—

Will the Government be pleased to state:—

(*a*) the amount provided for repairing tanks in Hassan District during 1951-52 and 1952-53;

(*b*) the amount provided for drinking water wells;

(*c*) whether such provision of funds has been separately shown in respect of major and minor tanks;

(*d*) of this, the amount allotted to Arsikere Taluk ?

A.—Sri KADIDAL MANJAPPA (Minister for Revenue and Public Works).—

(*a*)

	1951-52	1952-53
	Rs.	Rs.
Restoration of minor tanks.	1,10,000	95,000
Repairs to tanks ..	12,000	27,000

(*b*) 1951-52 Rs. 80,000.
1952-53 Rs. 19,000.

(*c*) Yes.

(Sri KADIDAL MANJAPPA.)

(*d*) The grants are not distributed talukwar, but for the P.W.D. Division as a whole.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿಗೆ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—1952-53ರಲ್ಲಿ ಒದಗಿಸಿರುವ ಹಣ ತುಂಬ ಕಡಮೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತುಂಬ ಕಡಮೆಯಲ್ಲ : ಅದರ ಹಿಂದಿನ ಸಾಲಿಗಿಂತ ಕಡಮೆ ಅಷ್ಟೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕು ಅಭಾವ ಪ್ರದೇಶವೆಂಬುದು ಗೊತ್ತಿದೆಯ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅದುದರಿಂದ ಅಲ್ಲಿಗೆ ಹೆಚ್ಚು ಕೊಡಬೇಕೆಂಬುದನ್ನು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ತಿಂಗಳ ಹಿಂದೆ ಆರು ಲಕ್ಷ ರೂಪಾಯಿಗಳನ್ನು ಕ್ಷಾಮ ಪರಿಹಾರಕ್ಕಾಗಿ ಹಾಸನ ಜಿಲ್ಲೆಗೆ ಕೊಟ್ಟಿದ್ದೇವೆ.

ಶ್ರೀ ಕೆ. ಪಂಚಾಕ್ಷರಯ್ಯ.—Preference should be given to Malnad areas ಎಂದು ಆ ಆಜ್ಞೆಯಲ್ಲಿದೆಯೆ ?

Sri KADIDAL MANJAPPA.—I do not remember.

Jodi and Inam Lands.

Q.—679. Sri D. M. GOVINDARAJU (Nelamangala) :—

Will the Government be pleased to state,—

(*a*) the number of Jodidars in the State (districtwar details to be given) ;

(*b*) the number of Inamdars in the State (districtwar details to be given) ;

(*c*) the extent of land in acres under the Jodi system ;

(*d*) the number of acres under the Inam system ;

(*e*) the amount collected by each Jodidar as revenue from the Jodi village he holds and the amount remitted to Government out of the said collection ;

(*f*) the total amount of revenue realised from the inam lands and out of the same, the amount paid to Government ;

(*g*) whether any steps have been taken by them for the abolition of the said systems ;

(*h*) whether they have prescribed any rules prohibiting the sale, etc., of Jodis and Inamthis ;

(*i*) if so, since how many years the said rules are in force ?

A.—Sri KADIDAL MANJAPPA (Minister for Revenue and Public Works.—

(*a*) Information is not readily available and will take considerable time for compilation as many jodi villages have a considerable number of hissedars.

(*b*) Information is not readily available and will take considerable time for compilation as many jodi villages have a considerable number of hissedars.

(*c*) As per Inam Settlement by the Inam Department, the extent of (whole Inam) Jodi villages was 3,36,307 acres and 15 guntas.

(*d*) As per Inam Settlement by the Inam Department, the extent of whole Inam villages other than Jodi villages was 1,50,847 acres 26 guntas and that of minor Inams in Government and Inam villages was 6,58,924 acres 35 guntas.

(*e*) Information is not available. Many of the Jodi villages are not surveyed and it is not possible to find out how much is collected every year.

(*f*) Particulars are not available (As per Inam Settlement the assessment of whole Inam villages and combined Quit-rent payable to Government were Rs. 3,73,408-12-9 and Rs. 67,651-13-1 respectively).

(*g*) Yes.

(*h*) Yes. Mysore Act XIX of 1950.

(*i*) Since 1950 when the above Act was first promulgated.

ಶ್ರೀ ಡಿ. ಎಂ. ಗೋವಿಂದರಾಜು.—ಜೋಡೀದಾರರು ಮತ್ತು ಇನಾಂದಾರರ ಸಂಖ್ಯೆ ಗೊತ್ತಿಲ್ಲವೆಂದು ಹೇಳಿದೆ, ಅದನ್ನು ಕಂಡುಹಿಡಿಯುವುದು ಅಷ್ಟು ಕಷ್ಟವೆ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೊಂದು ಗ್ರಾಮದಲ್ಲಿಯೂ ಅನೇಕ ಹಿಸ್ಸೆಗಳನ್ನು ಮಾಡಿಕೊಂಡು, ಪರಾ